**MS – 049**

## IV Semester B.A. / B.H.M. Examination, May/June 2014
## (2012 – 13 & Onwards) (Freshers + Repeaters)
### ಕನ್ನಡ ಭಾಷಾ ಪತ್ರಿಕೆ – IV
### ಸಾಹಿತ್ಯ ಸಲ್ಲಾಪ - ೨

Time : 3 Hours　　　　　　Max. Marks : 100

I. 1) ಈ ಪದ್ಯದ ಭಾವಾರ್ಥ ಬರೆಯಿರಿ: **(1×6=6)**

ಆ ವಿಕಟಾಂಗನೊಳಂತಾ
ದೇವಿಗೆ ರುಚಿಯಾಗೆ ರತಿಫಲಾಸ್ವಾದನದೊಳ್
ಬೇವಂ ಮೆಚ್ಚಿದ ಕಾಗೆಗೆ
ಮಾವಿಳಿದಪ್ಪಂತೆ ಪತಿಯೊಳಿಳಿದಾಯ್ತು ಮನಂ

2. ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ: **(2×3=6)**

ಕನಕದಾಸ, ಕೈ ಕೆಸರಾದರೆ ಬಾಯಿ ಮೊಸರು, ಬೆಂದ ಬಿದಿಗೆ ಕಣ್ಣಿಲ್ಲಕ್ಕುಂ

II. 1) ಇವುಗಳಲ್ಲಿ **ಐದು** ಪದಗಳಿಗೆ ಮೂಲರೂಪ ಬರೆಯಿರಿ: **(5×1=5)**

ಸಾಸಿರ, ಬಿದಿ, ಕತ್ತುರಿ, ಸಕ್ಕದ, ಪ್ಯಾಂಟು, ಆಸ್ಪತ್ರೆ, ಸೈಕಲ್ಲು

2) ಇವುಗಳಲ್ಲಿ **ಐದು** ಪದಗಳಿಗೆ ಅರ್ಥ ಬರೆಯಿರಿ: **(5×1=5)**

ಅರ್ಕ, ಅವನಿ, ಕುಟುಗಣ್, ಪರಾಕು ಹಾಕು, ಪೀತಾಂಬರ, ಕಾಲಿಗೆ ಬುದ್ಧಿ ಹೇಳು, ರಣಹೇಡಿ.

3) ಇವುಗಳಲ್ಲಿ **ಐದು** ಪದಗಳನ್ನು ಬಿಡಿಸಿ ಬರೆಯಿರಿ: **(5×1=5)**

ಕುಳಿನೊಸಲ್, ಇಮ್ಮಡಿ, ಇಬ್ಬನಿ, ಹಳಗನ್ನಡ, ಹೆಜ್ಜೇನು, ಕಣೆಗೋಲ, ನೀಲಕಂಠ.

4) ಕೆಳಗೆ ಕೊಟ್ಟಿರುವ ಪದಗಳನ್ನು ಬಳಸಿಕೊಂಡು ಸ್ವಂತ ವಾಕ್ಯಗಳನ್ನು ರಚಿಸಿರಿ: **(5×1=5)**

ಕಮಲದಂತೆ, ಭೀಮನಂತೆ, ಆಕಾಶದಂತೆ, ಕ್ಷೀರಸಾಗರ, ಮುಖಕಮಲ.

III. ಇವುಗಳಲ್ಲಿ **ನಾಲ್ಕು** ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ: **(4×5=20)**

1) ಆತನೇ ನನಗೆ ಇಂದ್ರ, ಚಂದ್ರ ಎಂದು ಅಮೃತಮತಿ – ಹೇಳಲು ಕಾರಣವೇನು ?

2) ಬಡತನವನ್ನು ಕುರಿತಂತೆ ವಿಜಯದಾಸರ ಅಭಿಪ್ರಾಯಗಳೇನು ?

3) ಬೋಬಣ್ಣನ ಸಂಸಾರ ಅಶಾಂತಿಗೆ ಒಳಗಾಗಲು ಕಾರಣಗಳೇನು ?

4) ಫಕೀರನ ಪ್ರಶ್ನೆಗೆ ಸೂಫಿ ನೀಡಿದ ಸಲಹೆಯೇನು ?

5) ಮದರಾಸಿನ ಗೆಳೆಯ ಪ್ರಬಂಧಕಾರರ ಮೇಲೆ ಸಿಟ್ಟಾಗಲು ಕಾರಣವೇನು ?

6) ಮಾತೃಭಾಷಾ ಶಿಕ್ಷಣದ ಬಗೆಗೆ ಲೇಖಕರ ಅಭಿಪ್ರಾಯಗಳೇನು ?

IV. ಇವುಗಳಿಗೆ ವಿವರವಾಗಿ ಉತ್ತರಿಸಿ : **(4×12=48)**

1) ''ಮುಟ್ಟಿದ ಮನಮಂ ತೊಟ್ಟನೆ ಪಸಾಯದಾನಂಗೊಟ್ಟಳ್'' – ಎಂಬ ಮಾತನ್ನು ವಿಮರ್ಶಿಸಿ.

**ಅಥವಾ**

ಜ್ಞಾನಿಯಾದವನು ಸಂಸಾರದಲ್ಲಿ ಹೇಗಿರಬೇಕೆಂದು ಕನಕದಾಸರು ತಿಳಿಸಿದ್ದಾರೆ ? ವಿವರಿಸಿ.

2) ಅಸಹಾಯಕ ಹೆಣ್ಣಿನ ಮನಃಸ್ಥಿತಿ ಮತ್ತು ಶೋಷಣೆಗೆ ಒಳಗಾಗುವ ಪರಿ 'ಬಾಳು' ಕತೆಯಲ್ಲಿ ಹೇಗೆ ವ್ಯಕ್ತವಾಗಿದೆ ? ವಿಶದಪಡಿಸಿ.

**ಅಥವಾ**

ಅಲ್ಲಾನ ನೂರನೆಯ ಹೆಸರು ಯಾವುದು? ಅದರ ಹಿನ್ನೆಲೆಯನ್ನು 'ಸೂಫಿ'ಯ ಮಾತಿನಲ್ಲಿ ವಿಮರ್ಶಿಸಿ.

[illegible] ದೃಷ್ಟಿಕೋನವೇನು ? ವಿವರಿಸಿ.

**ಅಥವಾ**

ಗೊರಕೆಯ 'ಲಯ'ದಲ್ಲಿ ಕಾವ್ಯಕೌಶಲ್ಯವನ್ನು ಗುರುತಿಸಿದ ಲೇಖಕರ ಕಲೆಗಾರಿಕೆಯನ್ನು ಚಿತ್ರಿಸಿರಿ.

4) ಸಮಕಾಲೀನ ರಾಜಕಾರಣದ ಒಳನೋಟಗಳು 'ತಿರುಕರಾಜ' ನಾಟಕದಲ್ಲಿ ಚಿತ್ರಿತವಾಗಿರುವ ಬಗೆಯನ್ನು ವಿವರಿಸಿ.

**ಅಥವಾ**

ರಾಜಗುರು, ಮಹಾರಾಣಿ, ಮಂತ್ರಿ – ಇವರಲ್ಲಿ ಯಾವುದಾದರೂ ಎರಡು ಪಾತ್ರಗಳನ್ನು ಪರಿಚಯ ಮಾಡಿಕೊಡಿ.